ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1554

ಉತ್ತರ ದಿನಾಂಕ : 11.03.2022

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯಲ್ಲಿ ಜಲ ಜೀವನ್ ಮಿಷನ್" ಯೋಜನೆ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ' ಸ್ವಚ್ಛ ಭಾರತ್ ಅಭಿಯಾನ'ದಲ್ಲಿ ಆಗಿರುವ ಪ್ರಗತಿಯೇನು;	ಜಲಜೀವನ್ ಮಿಷನ್ ಯೋಜನೆಯಡಿ ವಿಜಯಪುರ ಜಿಲ್ಲೆಯ ಎಲ್ಲಾ ಜನವಸತಿಗಳಿಗೆ 55 LPCD ಯಂತೆ ಶುದ್ಧ ಕುಡಿಯುವ ನೀರನ್ನು ಸರಬರಾಜು (Bulk water supply only) ಮಾಡಲು 02 ಸಮಗ್ರ ಯೋಜನೆಗಳನ್ನು ಅನುಮೋದಿಸಿದ್ದು, ಈ ಯೋಜನೆಗಳು ಟೆಂಡರ್ ಪ್ರಕ್ರಿಯೆ ಹಂತದಲ್ಲಿರುತ್ತವೆ. ವಿಜಯಪುರ ಜಿಲ್ಲೆಯಲ್ಲಿ ಒಟ್ಟು 1035 ಜನವಸತಿಗಳಿದ್ದು, ಜಲಜೀವನ್ ಮಿಷನ್ ಯೋಜನೆಯಡಿ ಜಲಮೂಲ ಅಭಿವೃದ್ಧಿ ಮತ್ತು ಪುನಶ್ಚೇತನ ಕಾಮಗಾರಿಗಳು ಸೇರಿದಂತೆ ಈವರೆಗೆ 912 ಜನವಸತಿಗಳಲ್ಲಿನ ಎಲ್ಲಾ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸುವ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ 487 ಕಾಮಗಾರಿಗಳಿಗೆ ಟೆಂಡರ್ ಮುಖಾಂತರ ಗುತ್ತಿಗೆದಾರರನ್ನು ನೇಮಿಸಿ, ಕಾರ್ಯಾದೇಶವನ್ನು ನೀಡಲಾಗಿರುತ್ತದೆ ಹಾಗೂ 138 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. ಒಟ್ಟು 487 ಕಾಮಗಾರಿಗಳಲ್ಲಿ 206 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯ ಹಂತದಲ್ಲಿರುತ್ತದೆ. ವಿಜಯಪುರ ಜಿಲ್ಲೆಯಲ್ಲಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಪ್ರಗತಿಯನ್ನು **ಅನುಬಂಧದಲ್ಲಿ** ನೀಡಿದೆ. ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ವಿಜಯಪುರ ಜಿಲ್ಲೆಯಲ್ಲಿ ವಿವಿಧ ಘಟಕಾಂಶಗಳ ಪ್ರಗತಿಯನ್ನು ಕೆಳಕಂಡಂತೆ ವಿವರಿಸಲಾಗಿದೆ. 2.86ಲಕ್ಷ ಕುಟುಂಬಗಳಗೆ ವೈಯಕ್ತಿಕ ಗೃಹ ಶೌಚಾಲಯಗಳ ನಿರ್ಮಾಣ 103 ಸಮುದಾಯ ಶೌಚಾಲಯಗಳ ನಿರ್ಮಾಣ ಮಾಡಲಾಗಿದೆ. 186 ಗ್ರಾಮ ಪಂಚಾಯಿತಿಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ DPR ಅನುಮೋದನೆ ನೀಡಲಾಗಿದ್ದು, ಪ್ರಸ್ತುತ 110 ಗ್ರಾಮ ಪಂಚಾಯಿತಿಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಕಾರ್ಯಾಚರಣೆಯಲ್ಲಿರುತ್ತದೆ. 398 ಗ್ರಾಮಗಳಲ್ಲಿ ದ್ರವತ್ಯಾಜ್ಯ ನಿರ್ವಹಣೆಗೆ DPR ಅನುಮೋದನೆ ನೀಡಲಾಗಿದೆ.

ಆ)	ಅಮೃತ ಯೋಜನೆಯಡಿಯಲ್ಲಿ ಕಳೆದ ಒಂದು ವರ್ಷದಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು	ಭಾರತದ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಹಿನ್ನೆಲೆಯಲ್ಲಿ ದಿನಾಂಕ:15.08.2021ರಂದು ಮಾನ್ಯ ಮುಖ್ಯಮಂತ್ರಿಗಳು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಘೋಷಿಸಿದಂತೆ ರಾಜ್ಯದ ಆಯ್ದ 750 ಗ್ರಾಮ ಪಂಚಾಯಿತಿಗಳಲ್ಲಿ ಸಮಗ್ರ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಅಮೃತ ಗ್ರಾಮ ಪಂಚಾಯಿತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಅಮೃತ ಗ್ರಾಮ ಪಂಚಾಯಿತಿ ಯೋಜನೆಯ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಕಡ್ಡಾಯವಾಗಿ ಹಾಗೂ ಶಿಫಾರಸ್ಸು ಮಾಡಿದ ಕಾರ್ಯಕ್ರಮಗಳ ವಿವರ ಈ ಕೆಳಗಿನಂತಿದೆ. **I. <u>ಕಡ್ಡಾಯ ಕಾರ್ಯಕ್ರಮಗಳು:</u>**
ಇ)	ಇತರೆ ಯಾವ ಯಾವು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ?(ವಿವರ ನೀಡುವುದು)	**1) ಶಾಲೆಗಳಲ್ಲಿ ಮೂಲ ಸೌಕರ್ಯ** a) ಕಾಂಪೌಂಡ್ (COMPOUND) b) ಆಟದ ಮೈದಾನ (PLAY GROUND) c) ಶೌಚಾಲಯ (TOILETS) d) ಕುಡಿಯುವ ನೀರಿನ ಸೌಲಭ್ಯ (DRINKING WATER) **2) ಅಂಗನವಾಡಿಗಳಲ್ಲಿ ಮೂಲ ಸೌಕರ್ಯ** a) ಶೌಚಾಲಯ (TOILETS) b)ಕುಡಿಯುವ ನೀರಿನ ಸೌಲಭ್ಯ (DRINKING WATER 3) ಘನ ತ್ಯಾಜ್ಯ ನಿರ್ವಹಣೆ (SWM) 4) ದ್ರವ ತ್ಯಾಜ್ಯ ನಿರ್ವಹಣೆ (LWM) 5) ಪ್ರತಿ ಮನೆಗೂ ನಳ ಮುಖಾಂತರ ಕುಡಿಯುವ ನೀರು (FHTC) 6) ಗ್ರಂಥಾಲಯಗಳ ಡಿಜಿಟಲೀಕರಣ (DIGITAL LIBRARY) 7) ಬೀದಿ ದೀಪಗಳ ನಿರ್ವಹಣೆ (STREET LIGHTS) 8) ಗ್ರಾ.ಪಂ. ಕಟ್ಟಡಕ್ಕೆ ಸೌರ ವಿದ್ಯುತ್ ಅಳವಡಿಕೆ (SOLAR FOR GP BUILDING) **II . <u>ಶಿಫಾರಸ್ಸು ಮಾಡಿದ ಹೆಚ್ಚುವರಿ ಚಟುವಟಿಕೆಗಳು:</u>** 1. ಅಮೃತ ಉದ್ಯಾನವನ 2. ಸ್ಮಶಾನ ಅಭಿವೃದ್ಧಿ 3. ಕೆರೆ/ಕಲ್ಯಾಣಿ/ ಗೋಕಟ್ಟೆ ಅಭಿವೃದ್ಧಿ 4. NRLM ಸ್ವಸಹಾಯಕ ಗುಂಪು ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ (SHG) 5. ಶಾಲೆಗಳಲ್ಲಿ ಪೌಷ್ಠಿಕ ತೋಟ 6. ಅಂಗನವಾಡಿಗಳಲ್ಲಿ ಪೌಷ್ಠಿಕ ಆಹಾರ 7. ಸಾರ್ವಜನಿಕ ಆಟದ ಮೈದಾನ ಅಭಿವೃದ್ಧಿ 8. ಗ್ರಾಮಗಳಲ್ಲಿ ಸೋಲಾರ್ ಬೀದಿ ದೀಪಗಳ ಅಳವಡಿಕೆ 9. ಬಾಪೂಜಿ ಸೇವಾ ಕೇಂದ್ರದ ಮೂಲಕ ಸೇವೆಗಳ ವಿತರಣೆ 10. ಕೆರೆ ನಿರ್ವಹಣಾ ಸಮಿತಿಗಳನ್ನು ರಚಿಸುವುದು.

ಸಂ:ಗ್ರಾಕುನೀ&ನೈಇ 163 ಗ್ರಾನೀಸ(4)2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಚುಕ್ಕೆ ರಹಿತ ಪ್ರಶ್ನೆ ಸಂ: 1554 ರ ಅನುಬಂಧ – 01

ಜಿಲ್ಲಾ ಪಂಚಾಯಿತಿ, ವಿಜಯಪುರ

2020–21 ನೇ ಸಾಲಿನ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪ್ರಗತಿ ವರದಿ –2021ರ (ದಿ: 03–04–2021 ರಂದು) ಅಂತ್ಯದವರೆಗೆ

(ರೂ.ಲಕ್ಷಗಳಲ್ಲಿ)

ಅ. ಸಂ	ತಾಲೂಕು	ನೋಂದಣಿ ಮಾಡಿಸಿಕೊಂಡ ಒಟ್ಟು ಕುಟುಂಬಗಳ ಸಂಖ್ಯೆ	ಉದ್ಯೋಗ ಚೀಟಿ ಪಡೆದ ಕುಟುಂಬಗಳ ಸಂಖ್ಯೆ	100 ದಿನ ಉದ್ಯೋಗ ಪೂರ್ಣಗೊಳಿಸಿದ ಕುಟುಂಬಗಳ ಸಂಖ್ಯೆ	ಉದ್ಯೋಗ ಬೇಡಿ ಅರ್ಜಿ ಸಲ್ಲಿಸಿದ ಕುಟುಂಬಗಳ ಸಂಖ್ಯೆ	ಉದ್ಯೋಗ ಪಡೆದ ಕುಟುಂಬಗಳ ಸಂಖ್ಯೆ	ಮಂಜೂರಾದ ಒಟ್ಟು ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಉತ್ಪತ್ತಿಯಾದ ಮಾನವ ದಿನಗಳು	ಲಭ್ಯವಿರುವ ಅನುದಾನ (ಆರಂಭಿಕ ಶಿಲ್ಕು ಸೇರಿ) ಒಚಲ ಆಧಾರಿತ	ಲಭ್ಯವಿರುವ ಅನುದಾನದಲ್ಲಿ ಖರ್ಚಾದ ಅನುದಾನ MIS ಆಧಾರಿತ	ಇನ್ನೂ ಪಾವತಿಸಬೇಕಾದ ಮೊತ್ತ ಒಚಲ ಆಧಾರಿತ (Due payment)	ಒಟ್ಟು ಖರ್ಚು(ಇನ್ನೂ ಪಾವತಿಸಬೇಕಾದ ಮೊತ್ತ ಸೇರಿ) MIS ಆಧಾರಿತ (13+14)
1	2	3	4	5	6	7	8	9	10	11	12	13	14	15
1	BABALESHWAR	21982	21972	497	8562	7429	3234	1099	2135	338805	1131.22	1131.22	236.49	1367.7
2	BASAVANA BAGEVADI	20579	20514	726	6134	5334	3167	1641	1526	278302	959.94	959.94	78.48	1038.4
3	CHADACHANA	17717	17587	795	9488	8360	3724	1472	2252	391096	1215.76	1215.76	244.49	1460.3
4	DEVARA HIPPARAGI	23753	23663	366	9907	8511	2746	928	1818	333712	1448.25	1448.25	249.57	1697.8
5	INDI	44031	43613	2895	24430	21589	10233	3714	6519	1071855	4016.59	4016.59	1053.4	5070.0
6	KOLHAR	9058	9035	114	2566	1847	1258	612	646	72740	217.57	217.57	40.61	258.2
7	MUDDEBIHAL	20804	20764	941	8906	7578	3603	1323	2280	334112	1265.25	1265.25	384.58	1649.8
8	NIDAGUNDI	9310	9240	154	3220	2303	1238	470	768	94235	335.16	335.16	123.08	458.2
9	SINDGI	49754	49204	1577	22916	20321	5569	2083	3486	902111	3134.54	3134.54	530.63	3665.2
10	THALIKOTI	20293	20237	442	7266	6017	2893	1386	1507	256880	901.26	901.26	116.18	1017.4
11	THIKOTA	21979	21979	1045	7481	6706	3140	959	2181	363169	1373.55	1373.55	318.57	1692.1
12	VIJAYPURA	25677	25668	933	9238	8284	4779	2095	2684	453093	1650.86	1650.86	274.67	1925.5
ಒಟ್ಟು:		284937	283476	10485	120114	104279	45584	17782	27802	4890110	17649.96	17649.96	3650.77	21300.7

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯಿತಿ ವಿಜಯಪುರ ಇವರ ಪರವಾಗಿ